566. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) ಮತ್ತು ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಭೂ ಪರಿಮಿತಿ ಕಾಯ್ದೆ ಯಾವಾಗ ಅಸ್ತಿತ್ವಕ್ಕೆ ಬಂದಿದೆ;

ಆ) ಈ ಕಾಯ್ದೆಯ ಅನ್ವಯ ಇದುವರೆವಿಗೂ ಎಷ್ಟು ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ;

ಇ) ಹಾಲಿ ಎಷ್ಟು ಪ್ರಕರಣಗಳನ್ನು ಈ ಕಛೇರಿ ಕೈಗೆತ್ತಿಗೊಂಡಿದೆ;

ಈ) ಈ ಕಛೇರಿಯನ್ನು ತೆರೆದಂದಿನಿಂದ ಇಲ್ಲಿಯವರೆಗೆ ಸರ್ಕಾರದ ಬೊಕ್ಕಸಕ್ಕೆ ಬಂದ ಆದಾಯವೆಷ್ಟು;

ಉ) ಸಿಬ್ಬಂದಿ ವರ್ಗ, ಪೆಟ್ರೋಲ್ ಮುಂತಾದವುಗಳಿಗಾಗಿ ಪ್ರತಿ ತಿಂಗಳು ವೆಚ್ಚ ಮಾಡುತ್ತಿರುವ ಮೊಬಲಗೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ನಗರ ಭೂ ಪರಿಮಿತಿ ಕಾಯ್ದೆಯು ದಿನಾಂಕ 17–2–1976 ರಿಂದ ಜಾರಿಗೆ ಬಂದಿರುತ್ತದೆ.

ಆ) ನಗರ ಭೂ (ಪರಿಮಿತಿ ಮತ್ತು ನಿಯಮ) ಕಾಯ್ದೆ, 1976ರ ಕಲಂ 10(5)ರನ್ವಯ 2,036.32 ಎಕರೆ ಜಮೀನುಗಳನ್ನು ಸರ್ಕಾರದ ಸ್ವಾಧೀನಕ್ಕೆ ಪಡೆಯಲಾಗಿದೆ.

ಇ) ಕಾಯಿದೆ ಜಾರಿಗೆ ಬಂದಲಾಗಾಯ್ತು ಇಲ್ಲಿಯವರೆಗೆ 33,478 ಪ್ರಕರಣಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 21,341 ಪ್ರಕರಣಗಳನ್ನು ತೀರ್ಮಾನಿಸಲಾಗಿದೆ. ಹಾಲಿ 12,137 ಪ್ರಕರಣಗಳು ಬಾಕಿ ಇರುತ್ತವೆ.

ಈ) 73,66,382 ರೂ.ಗಳು.

ಉ) 3,06,085 ರೂ.ಗಳು.

ರಾಮನಗರ ತಾಲ್ಲೂಕಿನ ನಾಡ ಕಛೇರಿಯ ಅಧಿಕಾರಿಗಳು ಪಟ್ಟ ಮತ್ತು ಪಹಣಿಗಳನ್ನು ಬರೆಯುವಾಗ ಹೇರಳವಾದ ಹಣವನ್ನು ವಸೂಲಿ ಮಾಡುತ್ತಿರುವ ಬಗ್ಗೆ

629. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) :– ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) ರಾಮನಗರ ತಾಲ್ಲೂಕಿನ ಕೂಟಗಲ್‌ನಲ್ಲಿರುವ ನಾಡ ಕಛೇರಿಯ ಅಧಿಕಾರಿಗಳು ಹಾಗೂ ನೌಕರರು ಕೃಷ್ಣಾಪುರ ಮಾರೇಗೌಡನದೊಡ್ಡಿ, ಮೆಳೇಹಳ್ಳಿ, ಇತ್ಯಾದಿ ಗ್ರಾಮಗಳಲ್ಲಿರುವ ಜಮೀನಿನ ಮಾಲೀಕರುಗಳಿಗೆ ಪಟ್ಟ, ಪಹಣಿ ಇತ್ಯಾದಿಗಳನ್ನು ಬರೆಯುವ ಸಮಯದಲ್ಲಿ ಹೇರಳವಾದ ಹಣವನ್ನು ವಸೂಲಿ ಮಾಡಿ ತೊಂದರೆಗೀಡು ಮಾಡುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಲ್ಲದಿದ್ದ ಪಕ್ಷದಲ್ಲಿ ಈ ಬಗ್ಗೆ ನಿಷ್ಪಕ್ಷವಾದ ವಿಚಾರಣೆಯನ್ನು ಮಾಡಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :–

ಅ) ಈ ಬಗ್ಗೆ ಕೆಲವು ದೂರು ಅರ್ಜಿಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಹೌದು, ಈ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಜಿಲ್ಲಾವಾರು ಮಟ್ಟದಲ್ಲಿ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸುವ ಬಗ್ಗೆ